*ವೆಂಕಟೇಶ ಎಂ. ಪೈ, ಕಾಸರಕೋಡ*
*'ಬೇಗ ಮಲಗು, ಬೇಗ ಏಳು' ಎನ್ನುವುದೇಕೆ?*



ನಿಧಾನವಾಗಿ ಎದ್ದರೆ ನೀರು ನಿಂತುಹೋಗಿರುತ್ತದೆ!

*ಎನ್. ಪ್ರಕಾಶ್, ದೇವನಹಳ್ಳಿ*
*ರೋಗಿ ತಪ್ಪು ಮಾಡಿದರೆ ಶಿಕ್ಷೆ ಅನುಭವಿಸುತ್ತಾನೆ. ವೈದ್ಯನೇ ತಪ್ಪು ಮಾಡಿದರೆ?*
ಪಾಪ, ರೋಗಿಯ ಅಕಾಲ ಮರಣದಿಂದ ವೈದ್ಯನ ಆದಾಯ ತಗ್ಗುತ್ತದೆ!

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ದ್ರೋಹಗಳಲ್ಲಿ ಮಿತ್ರದ್ರೋಹ ದೊಡ್ಡದೋ, ಅಥವಾ ದೇಶದ್ರೋಹ ದೊಡ್ಡದೋ?*
ದೇಶದ್ರೋಹವೇ; ಅದು ಮಾತೃದ್ರೋಹ, ಭ್ರಾತೃದ್ರೋಹ, ಮಿತ್ರದ್ರೋಹ, ಪಿತೃದ್ರೋಹಗಳ ಕೊಲಾಬರೇಷನ್!

*ಎನ್.ಎಸ್. ಆನಂದ್, ಕತ್ತರಗುಪ್ಪ*
*ಕರೆಯದೆ ಬರುವವನಿಗೂ, ಕರೆದರೂ ಬರದವನಿಗೂ ಏನು ವ್ಯತ್ಯಾಸ ಗುರುವರ್ಯಾ?*
ಸಾಲ, ಶಿಷ್ಯೋತ್ತಮಾ! ಕೊಡುವ ಮುನ್ನ ಕರೆಯದೆಯೂ ಬರುವವನು, ಕೊಟ್ಟ ನಂತರ ಕರೆದರೂ ಬರುವುದಿಲ್ಲ!

*ವಸಂತಾ ಎನ್. ಬೆಂಗಳೂರು*
*ಮಗಳಿಗೆ ತಂದೆಯು ತೆಲುಗಿನಲ್ಲಿ, ತಾಯಿ ಕನ್ನಡದಲ್ಲಿ, ತಮ್ಮನು ತಮಿಳಿನಲ್ಲಿಪಾಠ ಹೇಳಿಕೊಟ್ಟರೆ ಅವಳ ಗತಿಯೇನು?*
ಬಿಡ್ಡ ತ್ರಿಭಾಷಾ ತಲೈವಿ ಅನಿ ಬಿರುದು ವಾಂಗ್ರಿದಿ!

*ಶಶಿಧರ ಹೊಳ್ಳ, ಹಿರಿಯೂರು*
*ರಿಯಾಲಿಟಿ ಷೋ ನೋಡಿಬಿಟ್ಟ ಹಳ್ಳಿ ಹೈದರೆಲ್ಲಾ ಪೇಟೆಗೆ ಹೋಗಿಬಿಟ್ಟರೆ ಹಳ್ಳೀಲಿ ಕೃಷಿ ಮಾಡೋವ್ರು ಯಾರು?*
'ಪೇಟೆ ಹುಡುಗ ಹಳ್ಳಿಗೆ ಬಂದ'ನಲ್ಲಾ, ಅವನೇ ಮಾಡುತ್ತಾನೆ!

*ಅರ್ಜುನ್ ವಿ. ಮಂಡ್ಯ*
*ದುನಿಯಾ, ಇನಿಯಾ, ಮುನಿಯಾ, ನಂತರ ಏನು?*
ಎದ್ದು ಹೊರಕ್ಕೆ ನಡಿಯಾ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ರಪ್ಪೋ! ರಾಮ ಕೃಪೆಯಿಂದ ವೈದ್ಯವಿಸ್ಮಯವಾಯಿತಂತೆ, ಹೇಗಂತೆ?*
ಬಿಲ್ಲು ಎತ್ತಲಾಗದುದಕ್ಕೆ ರೋಗಿಯನ್ನು ಹೊರಗಟ್ಟಿದುದರಿಂದ ಬದುಕಿಬಿಟ್ಟನಂತೆ!

*ಕೆ. ಮೈಥಿಲಿಕೃಷ್ಣ, ಬೆಂಗಳೂರು*
*ಪುನರ್ಜನ್ಮ ಇದ್ದರೆ ನೀವು ಎಲ್ಲಿ ಹುಟ್ಟಬೇಕೆನಿಸುತ್ತೆ? ಏಕೆ?*
ತಮಿಳುನಾಡಿನಲ್ಲಿ; ಅಲ್ಲಿಭಾಷೆ, ಕಲೆ, ಸಾಹಿತ್ಯ, ಕಲಾವಿದರ ಯೋಗ್ಯತೆಗೆ ತಕ್ಕ ಮನ್ನಣೆ ದೊರೆಯುತ್ತದೆ!

*ರಮೇಶ್, ಹನುಮನಾಳು*
*ಇತ್ತೀಚೆಗೆ ಮಹಿಳೆಯರು ಕೈಗೆ ಕಟ್ಟಿಕೊಳ್ಳುತ್ತಿದ್ದ ಕಪ್ಪುದಾರವನ್ನು ಕಾಲಿಗೆ ಕಟ್ಟಿಕೊಳ್ಳುತ್ತಿದ್ದಾರೇಕೆ...?*
ದಾರದ ಕೈಗುಣಕ್ಕಿಂತಲೂ ಕಾಲ್ಗುಣ ಚೆನ್ನಾಗಿದೆಯಂತೆ!

*ಎಂ.ಬಿ. ಖೋದಾನಪುರ, ಸವದತ್ತಿ*
*ಪ್ರೇಮಿಸುವಾಗಿನ ಪ್ರೀತಿ ಮದುವೆಯಾದಮೇಲೆ ಉಳಿಯುವುದೆ?*
ಖಂಡಿತ; ಪ್ರೇಮಿಸಿದವರೇ ಮದುವೆಯಾಗದಿದ್ದರೆ!

*ಎಂ.ಆರ್. ಪವನ್ ಕುಮಾರ್, ಬಳ್ಳಾರಿ*
*ಗಣಿಗೂ, ಗಣಿತಕ್ಕೂ ಏನು ವ್ಯತ್ಯಾಸ?*
ಗಣಿತದಲ್ಲಿಗುಣಾಕಾರ ಮುಖ್ಯ, ಗಣಿಯಲ್ಲಿಗುಣಿಯ ಆಕಾರ ಮುಖ್ಯ!

*ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ*
*ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ...?*



ಮಧ್ಯವರ್ತಿಗಳಿದ್ದಾರೆ, ಎಚ್ಚರ!

## ಬಹುಮಾನಿತ ಪ್ರಶ್ನೆ

*ಸವಿರವಿ, ಸವಿತ ರವಿಕುಮಾರ್, ಬಾಳೆಹೊನ್ನೂರು*
*ದೆವ್ವಕ್ಕೂ, ದೇವರಿಗೂ ಏನು ವ್ಯತ್ಯಾಸ?*



ಟೈಮಿಂಗ್ಸ್; ದೇವನಿಗೆ ಭಕ್ತ ಕೂಗಿದಾಗಲೆಲ್ಲಾ ಡ್ಯೂಟಿ; ದೆವ್ವಕ್ಕೆ ಪರ್ಮನೆಂಟ್ ನೈಟ್ ಷಿಫ್ಟ್!

*ಪಿ.ಎಸ್.ಶ್ರೀವತ್ಸ, ಬೆಂಗಳೂರು*
*ಮಠಾಧೀಶರು; ಇದರ ನಿಜವಾದ ಅರ್ಥ?*
ಮಟ್ಟ ನೋಡಿ ಮಣೆ ಹಾಕುವವರು!

*ಗಾಯತ್ರಿ, ರಾಜಾಜಿನಗರ*
*ಸುಧಾ ಪತ್ರಿಕೆ ತನ್ನ ಜನಪ್ರಿಯತೆಯನ್ನು ಸದಾ ಉಳಿಸಿಕೊಂಡಿರುವುದರ ಕಾರಣ ಓದುಗರೋ ಅಥವಾ...?*
ಓದುಗರೇ, ಅದರಲ್ಲೂಕ್ಲೊಂಡು ಓದುವ ಓದುಗರು! ಓದುಗರಿಲ್ಲದ ಪತ್ರಿಕೆಯಂ ಪ್ರಿಂಟಿಲ್ಲದೆಯೇ ತೂಕಕ್ಕೆ ಹಚ್ಚೆಂದ ಡಿಂಕಣ್ಣ!

ಅರ್.ಕೆ. ಹಾದಿಮನಿ, ಧಾರವಾಡ
2ಜಿ ರಾಜ ಬಳಿ ಇರುವುದು ಬಿಪಿಎಲ್ ಕಾರ್ಡೋ, ಎಪಿಎಲ್ ಕಾರ್ಡೋ?
ಎರಡೂ ಅಲ್ಲ; ಕ್ರಿಮಿನಲ್ ರೆ-ಕಾರ್ಡು!

*ಕೆ.ಆರ್.ದೇಸಾಯಿ, ರಾಯಚೂರು*
*ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ, ಭಾಷಣ ಬಲ್ಲವನಿಗೆ?*
ಟೈಂ ಸೆನ್ಸ್ ಇಲ್ಲ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ಕಣ್ಣು ಮನಸ್ಸಿನ ಕನ್ನಡಿಯಾದರೆ ಹೆಣ್ಣು?*
ಜೀವನದ ಮುನ್ನುಡಿ!

*ಸೋಮಶೇಖರ್, ಮೈಸೂರು*
*ಈ ಕಲಿಯುಗದಲ್ಲಿ ದೇವರನ್ನು ನಂಬಿದವರಿಗೆ ಏನಾಗುತ್ತದೆ?*
ಹಬ್ಬಹಬ್ಬಕ್ಕೂ ವೃಥಾ ಖರ್ಚಾಗುತ್ತದೆ!

■ ರಾಮ್